**ಪ್ರಧಾನ ಸಿವಿಲ್ ಮತ್ತು ಜೆಎಮ್ಎಫ್ ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.**

ಸಿಸಿ ನಂ.**2082/2023**

| | | |
|---|---|---|
| ಪಿರ್ಯಾದಿ | : | ಶ್ರೀ ವಿಜಯ್ ಕುಮಾರ್ ಗೌಡ ತಂದೆ ಕೈಲಾಶ, ವಯಸ್ಸುಃ 52 ವರ್ಷ, ಉಃ ಒಕ್ಕಲುತನ ಮತ್ತು ವ್ಯಾಪಾರ, ಸಾಃ ಮನೆ ನಂ.4-5-29/1, ಶ್ರೀ ಬಾಲಾಜಿ ಟೆಂಪಲ್ ರೋಡ್, ರೂರಲ್ ಪೋಲಿಸ್ ಸ್ಟೇಷನ್ ರೋಡ್ ಹತ್ತಿರ, ಯಾದಗಿರಿ, ತಾಃ ಮತ್ತು ಜಿಃ ಯಾದಗಿರಿ. |
| ಆರೋಪಿ | : | ಶ್ರೀ ಜೈಷ ಕುಮಾರ್ ತಂದೆ ಸಿದ್ರಾಮರೆಡ್ಡಿ, ವಃ 38 ವರ್ಷ, ಸಾಃ ಗುಮಟೆ ನಿವಾಸ, ಥೋಕ ಶಾಲೆ ಹತ್ತಿರ, ಬಸವೇಶ್ವರ ನಗರ ಯಾದಗಿರಿ, ತಾಃ ಮತ್ತು ಜಿಃ ಯಾದಗಿರಿ. |

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿತನ ಹೇಳಿಕ**

ಪ್ರಶ್ನೆಃ1ಃ ನೀವು ದೂರುದಾರರ ವಿಚಾರಣೆಯನ್ನು ಕೇಳಿದ್ದೀರಾ?

ಆರೋಪಿಯ ಉತ್ತರಃ

ಪ್ರಶ್ನೆ2 : ಪ್ರಾಸಾ-1 ಶ್ರೀ ವಿಜಯ್ ಕುಮಾರ್ ಗೌಡ ತಂದೆ ಕೈಲಾಶ ಇವರು ಪಿರ್ಯಾದಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಪಿರ್ಯಾದಿದಾರರು ಮತ್ತು ಆಪಾದಿತನಾದ ನೀವು ಪರಿಚಯಸ್ಥರಾಗಿರುತ್ತೀರಿ ಹಾಗೂ ಸದರಿ ಪರಿಚಯದ ಆಧಾರದ ಮೇಲೆ ನೀವು ದೂರುದಾರರಿಂದ ದಿನಾಂಕ **25.10.2022** ರಂದು ರೂ.**9,00,000/-** ಗಳನ್ನು ಸಾಲಪಡೆದಿರುತ್ತೀರಿ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆಃ 3 ಃ ಪ್ರಾಸಾ 1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ಸದರಿ ಹಣವನ್ನು ಮರುಪಾವತಿ ಮಾಡುವಂತೆ ಒತ್ತಾಯಿಸಿದಾಗ ಆಪಾದಿತನಾದ ನೀವು ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಚಿತ್ತಾಪುರ ಶಾಖೆಗೆ ಸೇರಿದ **115405** ಸಂಖ್ಯೆಯ ಚೆಕ್ ನಲ್ಲಿ ರೂ. **9,00,000/-** ಹಾಗೂ ದಿನಾಂಕ **25.04.2023** ಎಂದು ನಮೂದು ಮಾಡಿ ಬ್ಯಾಂಕಿಗೆ ಹಾಜರುಪಡಿಸಿ ನಗದೀಕರಿಸಿಕೊಳ್ಳುವಂತೆ ನೀಡಿದ್ದೀರಿ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆ 4ಃ ಪ್ರಾಸಾ 1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ಸದರಿ ಚೆಕ್‌ನ್ನು ಫಿರ್ಯಾದುದಾರರು ನಗದೀರಣಕ್ಕಾಗಿ ತಾವು ಖಾತೆ ಹೊಂದಿರುವ ಎಕ್ಸಿಸ್ ಬ್ಯಾಂಕ್**,** ಯಾದಗಿರಿ ಶಾಖೆಯ ಮೂಲಕ ಹಾಜರು ಪಡಿಸಿದಾಗ**, "Funds Insufficient"** ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡು ಚೆಕ್ಕನ್ನು ದಿನಾಂಕ **26.04.2023** ರಂದು ವಾಪಸ್ಸು ನೀಡಿರುತ್ತಾ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆ 5ಃ ಪ್ರಾಸಾ 1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ನಂತರ ಫಿರ್ಯಾದುದಾರರು ತಮ್ಮ ವಕೀಲರ ಮೂಲಕ ದಿನಾಂಕ **16.05.2023** ರಂದು ಅಪಾದಿತನಾದ ನಿಮ್ಮ ವಿಳಾಸಕ್ಕೆ ನೊಂದಾಯಿತ ಅಂಚೆಯ ಮೂಲಕ ತಿಳುವಳಿಕೆ ಪತ್ರವನ್ನು ಕಳುಹಿಸಿದ್ದು**,** ಸದರಿ ನೋಟಿಸ್ ದಿನಾಂಕ **19.05.2023** ರಂದು ಜಾರಿಯಾಗಿರುತ್ತದೆ. ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿದ್ದರು ದೂರುದಾರರಿಗೆ ಚೆಕ್‌ನ್ನು ನೀಡಿ ನಂತರ ಚೆಕ್ ಮೊತ್ತವನ್ನು ಪಾವತಿ ಮಾಡದೆ ಇರುವುದರ ಮೂಲಕ ವರ್ಗಾವಣೀಯ ಲಿಖಿತ ಕಾಯ್ದೆ ಕಲಂ 138 ರಡಿ ಅಪರಾಧ ಎಸಗಿದ್ದೀರಿ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆ **6**ಃ ಈ ಪ್ರಕರಣದ ಬಗ್ಗೆ ನೀವು ಏನಾದರೂ ಹೇಳಲು ಇಚ್ಚಿಸುತ್ತೀರಾ?

ಆರೋಪಿಯ ಉತ್ತರಃ

ಪ್ರಶ್ನೆ **7** ಃ ನಿಮ್ಮ ಪರ ಯವುದಾದರೂ ಸಾಕ್ಷಿಯನ್ನು ವಿಚಾರಣೆ ಮಾಡುತ್ತೀರಾ?

ಆರೋಪಿಯ ಉತ್ತರಃ

**(**ಮೇಲ್ಕಂಡಂತೆ ಆಪಾದಿತರಿಗೆ ತಿಳಿದ ಭಾಷ್ಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಪ್ರಶ್ನಿಸಿ, ಅವರು ನೀಡಿದ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.)

ದಿನಾಂಕಃ 01.12.2025
ಸ್ಥಳಃ ಯಾದಗಿರಿ

ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ ಸಿ
ನ್ಯಾಯಾಧೀಶರು,ಯಾದಗಿರಿ.